ಎಂ.ವಿ.ಸಿ. ನಂ. 812/2022
ಪಿಡಬ್ಲ್ಯೂ-1

(ಇಂದು ದಿನಾಂಕಃ 19-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲು 2 ನೇ ಎದುರುದಾರರ ಪರ ಶ್ರೀ VRM ವಕೀಲರಿಂದಃ**

ಮೃತ ಕಲ್ಯಾಣಿ ನನ್ನ ಮಗ. ಅಪಘಾತ ಆದಾಗ ಕಲ್ಯಾಣಿಗೆ 20 ವರ್ಷ ವಯಸ್ಸಾಗಿತ್ತು. ಅಪಘಾತ ಆದಾಗ ಕಲ್ಯಾಣಿ ಜೊತೆ ಪವನ್ ಹೆಸರಿನ ಇಬ್ಬರು ಇದ್ದರು. ಅವರು ದೇಗಲಮಡಿಯಿಂದ ಚಿಂಚೋಳಿಗೆ ಹೊರಟಿದ್ದರು. ಅಪಘಾತ ಹೇಮರೆಡ್ಡಿ ಮಲ್ಲಮ್ಮ ಕ್ರಾಸ ಬಳಿ ಆಗಿದೆ. ಕಾರನ್ನು ರಸ್ತೆಯ ಬದಿಯಲ್ಲಿ ಮೂತ್ರ ವಿಸರ್ಜನೆಗೆ ನಿಲ್ಲಿಸಿದಾಗ ಕಾರಿನಿಂದ ಇಳಿದ ನನ್ನ ಮಗನಿಗೆ ಮೋಟಾರ ಸೈಕಲ ಸವಾರ ಬಂದು ಮೋಟಾರ ಸೈಕಲ ಡಿಕ್ಕಿ ಪಡಿಸಿದ್ದರಿಂದ ಅಪಘಾತ ಆಗಿದೆ. ಪೊಲೀಸರು ತೋರಿಸಿರುವ ಸ್ಥಳ ಸ್ಕೆಚ್ ನಲ್ಲಿ ಅಪಘಾತವನ್ನು ರಸ್ತೆ ಮಧ್ಯ ತೋರಿಸಲಾಗಿದೆ ಎಂದರೆ ಸರಿಯಲ್ಲ. ಅಪಘಾತ ಪಡಿಸಿದ ಮೋಟಾರ ಸೈಕಲ ಹಿಂದೆ ಕುಳಿತಿದ್ದ ಪ್ರವೀಣ ನಮ್ಮ ಗ್ರಾಮದವನು. ಅಪಘಾತ ಆದ ದಿನ ನನ್ನ ಮಗ, ಪವನ್ ಮತ್ತು ಪ್ರವೀಣ ಮೂರು ಜನ ಮೋಟಾರ ಸೈಕಲ ಮೇಲೆ ಹೋಗುತ್ತಿದ್ದರು ಎಂದರೆ ಸರಿಯಲ್ಲ. ಹಾಗೆ ಹೋಗುವಾಗ ಮೂರು ಜನ ಹೋಗಿ RTO ಜಗನ್ನಾಥರವರ ಕಾರಿಗೆ ಡಿಕ್ಕಿ ಪಡಿಸಿ ಅಪಘಾತ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಮಗ ಮತ್ತು ಇಬ್ಬರು ಪವನಗಳು ಕಾರಿನಲ್ಲಿ ಚಿಂಚೋಳಿಗೆ ಹೋಗುತ್ತಿರುವಾಗ ದಾರಿಯಲ್ಲಿ ಮೂತ್ರ ವಿಸರ್ಜನೆಗೆ ಇಳಿದಾಗ ಮೋಟಾರ ಸೈಕಲ ಸವಾರ ಬಂದು ನನ್ನ ಮಗನಿಗೆ ಡಿಕ್ಕಿ ಪಡಿಸಿ ಅಪಘಾತ ಪಡಿಸಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೂರು ಜನ ಬೈಕ್ ಮೇಲೆ ಹೋಗುತ್ತಿದ್ದರು ಅಪಘಾತದ ನಂಬರ ಹಿಂಬದಿ ಸವಾರರಿಗೆ ಪರಿಹಾರ ಸಿಗುವುದಿಲ್ಲ ಎಂದು ಕಥೆ ಕಟ್ಟಿ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮಗ ಕೃಷಿ ಕೂಲಿಯಾಗಿ ಕೆಲಸ ಮಾಡುತ್ತಿದ್ದ. ನನ್ನ ಮಗ ಅವಿದ್ಯಾವಂತ. ನನ್ನ ಮಗ ತೀರಿ ಹೋದಾಗ ವಿದ್ಯಾಭ್ಯಾಸ ಮಾಡುತ್ತಿದ್ದ, ಕೂಲಿ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಹೆಂಡತಿ ಕೂಲಿ ಕೆಲಸ ಮಾಡಿ ಸಂಪಾದನೆ ಮಾಡುತ್ತಿದ್ದು ನನ್ನ ಮಗನ ಆದಾಯದ ಮೇಲೆ ಅವಲಂಬಿತರು ಅಲ್ಲ ಎಂದರೆ ಸರಿಯಲ್ಲ. 3 ನೇ ಅರ್ಜಿದಾರ ನನ್ನ ಚಿಕ್ಕ ಮಗ ಆಗಿದ್ದು ಆತನು ಸ್ವತಃ ಸಂಪಾದನೆ ಮಾಡುತ್ತಾನೆ ಮತ್ತು ನನ್ನ ಮೃತ ಮಗನ ಆದಾಯದ ಮೇಲೆ ಅವಲಂಬಿತರು ಆಗಿಲ್ಲ ಎಂದರೆ ಸರಿಯಲ್ಲ. ಪ್ರವೀಣ ಮೋಟಾರ ಸೈಕಲ ಚಾಲನೆ ಮಾಡಿ ಅಪಘಾತ ಪಡಿಸಿದ್ದು ಪಿ. ರಾಜೇಶ್ವರ ಮತ್ತು ಅಪಘಾತಕ್ಕೂ ಸಂಬಂಧ ಇಲ್ಲ ಎಂದರೆ

ಸರಿಯಲ್ಲ. ಆಧಾರ ಇಲ್ಲದೆ ಹೆಚ್ಚಿನ ಪರಿಹಾರ ಕೇಳಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.